

ವನ್ಯಜೀವಿ ಛಾಯಾಗ್ರಾಹಕ ವೀರೇಶ, ತನ್ನ ವಿಶಿಷ್ಟ ಛಾಯಾಚಿತ್ರಗಳಿಂದ ಈ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಗಳಿಸಿದ್ದ. ಒಮ್ಮೆ ಪುಸ್ತಕ ಒಂದರ ವಿನ್ಯಾಸಕ್ಕಾಗಿ ಅವನಿಗೆ ಕಾಡಿನ ಕೆಲವು ನೈಜ ಚಿತ್ರಗಳ ಅಗತ್ಯ ಬಿದ್ದಿತು. ಕೂಡಲೇ ತನ್ನ ಕ್ಯಾಮೆರಾ ತೆಗೆದುಕೊಂಡು, ಹಳೇ ಸ್ಕೂಟರನ್ನೇರಿ ಕಾಡಿಗೆ ತೆರಳಿದ. ಅದು ಎಲ್ಲ ಬಗೆಯ ಪ್ರಾಣಿಗಳಿದ್ದ ದಟ್ಟ ಕಾನನ. ವೀರೇಶ ಕಾಡಿನ ಮಧ್ಯಭಾಗಕ್ಕೆ ತೆರಳಿ ಕಾಡಿನ ಉತ್ತಮ ದೃಶ್ಯಗಳ ಚಿತ್ರಗಳನ್ನು ತೆಗೆಯುತ್ತಿದ್ದ. ಆಗ ಇದ್ದಕ್ಕಿದ್ದಂತೆ ಅವನ ಹಿಂದೆ ಏನೋ ಸದ್ದಾಗಿ ಹಿಂತಿರುಗಿ ನೋಡಿದ. ಅವನಿಗೆ ತನ್ನ ಜಂಘಾಬಲವೇ ಉಡುಗಿಹೋದಂತಾಯ್ತು. ಕಾರಣ ಅಲ್ಲಿ ಒಂದು ಹಸಿದ ಚಿರತೆ ನಿಂತು ಇವನನ್ನೇ ದುರುಗುಟ್ಟಿ ನೋಡುತ್ತಿತ್ತು. ಕೆಲವೇ ಕ್ಷಣಗಳಲ್ಲಿ ಅದು ತನ್ನ ಮೇಲೆರಗುವುದು ಖಚಿತವೆಂದು ವೀರೇಶನಿಗೆ ತಿಳಿಯಿತು. ಅಪಾಯಕಾಲದಲ್ಲಿ ಬುದ್ಧಿ ಉಪಯೋಗಿಸಿ ಪಾರಾಗಬೇಕೆಂದು ತನ್ನ ಅಜ್ಜಿ ಹೇಳುತ್ತಿದ್ದ ಮಾತು ನೆನಪಾಯಿತು. ಅದರಂತೆ ಉಪಾಯವೊಂದನ್ನು ಹೂಡಿದ.

ತಾನೇ ಮೆಲ್ಲಗೆ ಚಿರತೆಯ ಬಳಿ ಸಾರಿ, “ಚಿರತೆರಾಯ, ಹೇಗಿದ್ದೀಯಾ? ಕಾಡಿನಲ್ಲಿ ಎಲ್ಲರೂ ಕ್ಷೇಮವೇ?” ಎಂದು ಕುಶಲೋಪರಿ ವಿಚಾರಿಸಿದ. ಇವನ ಮಾತಿನ ಮರ್ಮವನ್ನರಿತ ಚಿರತೆ, “ಹೇ ಮಾನವ... ನಿನ್ನ ನಾಟಕದ ಮಾತುಗಳಿಗೆ ಮರುಳಾಗಲು ನಾನೇನು ಹುಲಿರಾಯ ಎಂದುಕೊಂಡೆಯಾ? ಅದೆಲ್ಲಾ ನನ್ನ ಬಳಿ ನಡೆಯದು. ನಾನೀಗ ತುಂಬಾ ಹಸಿದಿದ್ದೇನೆ. ನನ್ನ ಆಹಾರವಾಗಲು ಸಿದ್ಧನಾಗು” ಎಂದು ಹೂಂಕರಿಸಿತು. ಇದಕ್ಕೆ ಎದೆಗುಂದದ ವೀರೇಶ, “ಚಿರತೆರಾಯ ನಾನು ನಿನ್ನನ್ನು ಮೋಸಗೊಳಿಸಲಾರೆ. ನಾನು ಇತರೆ ಮಾನವರಂತಲ್ಲ. ನಾನೊಬ್ಬ ಬಡ ಛಾಯಾಗ್ರಾಹಕ. ಕಾಡಿನ ಸುಂದರವಾದ ಚಿತ್ರಗಳನ್ನು ತೆಗೆಯಲು ಮಾತ್ರ ನಾನಿಲ್ಲಿ ಬಂದಿದ್ದೇನೆ. ನನ್ನಿಂದ ನಿಮಗೆ ಏನೂ ತೊಂದರೆಯಾಗದು'' ಎಂದು ಹೇಳಿ ತಾನು ತೆಗೆದಿರುವ ಕಾಡಿನ ಛಾಯಾಚಿತ್ರಗಳನ್ನು ಚಿರತೆಗೆ ತೋರಿಸಿದ. ಕಾಡಿನ ಚಿತ್ರಗಳನ್ನು ನೋಡಿ ಖುಷಿಯಾದ ಚಿರತೆ, ''ನಿನ್ನ ಕ್ಯಾಮೆರಾದಲ್ಲಿ ನನ್ನ ಛಾಯಾಚಿತ್ರವೂ ಬರುತ್ತದೆಯೇ? ಅದನ್ನು ನನಗೆ ತೆಗೆದುಕೊಡುವೆಯಾ?'' ಎಂದು ಕೇಳಿತು. ವೀರೇಶ ಚಿರತೆಯನ್ನು ಸನಿಹದಲ್ಲೇ ನಿಲ್ಲಿಸಿಕೊಂಡು ತನ್ನ ಕ್ಯಾಮೆರಾ ಕೈಚಳಕದಿಂದ ಚಿರತೆಯ ಸುಂದರವಾದ ಒಂದೆರೆಡು ಚಿತ್ರಗಳನ್ನು ತೆಗೆದು ತೋರಿಸಿದ. ತನ್ನ ಚಿತ್ರಗಳನ್ನು ನೋಡಿ ಚಿರತೆ ಬಹಳ ಖುಷಿಗೊಂಡಿತು. ಇದನ್ನೇ ಸುಸಮಯವೆಂದು ತಿಳಿದ ವೀರೇಶ, ''ಚಿರತೆರಾಯ, ನೀನು ಆ ದೂರದಲ್ಲಿರುವ ಎತ್ತರದ ಬಂಡೆಯ ಮೇಲೆ ಹತ್ತಿ ಕುಳಿತುಕೊ. ನಾನು ಇಲ್ಲಿಯೇ ನಿಂತು ನಿನ್ನ ಚಿತ್ರ ಸೆರೆಹಿಡಿಯುವೆ. ಆಗ ನೀನು ಇನ್ನೂ ಮುದ್ದಾಗಿ ಕಾಣುವೆ'' ಎಂದು ಆ ಪ್ರಾಣಿಯನ್ನು ಒಪ್ಪಿಸಿದ. ಚಿರತೆ ಅಲ್ಲೇ ಸ್ವಲ್ಪ ದೂರದಲ್ಲಿದ್ದ ಬಂಡೆ ಏರಿ ನಿಲ್ಲುವಂತೆ ಮಾಡಿದ. ಕೆಲ ಚಿತ್ರಗಳನ್ನು ಕ್ಲಿಕ್ಕಿಸಿ ನಂತರ ''ಚಿರತೆರಾಯ, ಈಗ ನೀನು ಹಿಮ್ಮುಖವಾಗಿ ಕುಳಿತುಕೋ... ನಾನು ಹಿಂಬದಿಯಿಂದ ನಿನ್ನ ಚಿತ್ರಗಳನ್ನು ತೆಗೆಯುವೆ. ಆದರೆ ನಾನು ಹೇಳುವವರೆಗೂ ನೀನು ಹಿಂತಿರುಗಿ ನೋಡಬಾರದು'' ಎಂದ. ಚಿರತೆ ಹಿಮ್ಮುಖವಾಗಿ ಕುಳಿತುಕೊಂಡಿತು. ಚಿರತೆ ಅತ್ತ ತಿರುಗುತ್ತಿದ್ದಂತೆ ಇತ್ತ ವೀರೇಶ ತನ್ನ ಸ್ಕೂಟರ್ ಏರಿ ಹಿಂತಿರುಗಿಯೂ ನೋಡದೇ ಕಾಡಿನಿಂದ ಹೊರಬಂದು ಊರಿನತ್ತ ದೌಡಾಯಿಸಿದ!